## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಸಕಇ 389 ಪಕವಿ 2021 ದಿನಾಂಕ:08-11-2021.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ಸಕನಿ/ಇಡಿ-6/ಸಿಆರ್-13/2022-23 ದಿನಾಂಕ: 16-06-2022.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1) ರಲ್ಲಿ ರಾಜ್ಯಾದ್ಯಾಂತ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆದಿರುವ ಬಾಲಕಿಯರಿಗೆ ತರಬೇತಿ ನೀಡಲು ಕರಾಟೆ, ಜೂಡೋ, ಟಿಕ್ವಂಡೋ ಇತ್ಯಾದಿ ಸ್ವಯಂ ರಕ್ಷಣಾ ಕೌಶಲ್ಯಗಳ ತರಬೇತಿಯ ಆಯ್ಕೆಯ ಸಮಿತಿಯನ್ನು ರಚಿಸಿ ತರಬೇತಿ ನೀಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2) ರ ಪತ್ರದಲ್ಲಿ ಪರಿಶಿಷ್ಟ ಜಾತಿ ಬಾಲಕಿಯರ ಸ್ವಯಂ ರಕ್ಷಣೆಗಾಗಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸಲಾಗುತ್ತಿರುವ 303 ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ 2021-22ನೇ ಸಾಲಿನಲ್ಲಿ ದಾಖಲಾಗಿರುವ 17564 ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿ ನೀಡುವುದರ ಬಗ್ಗೆ ತರಬೇತಿಗೆ ತಗಲಬಹುದಾದ ವೆಚ್ಚಗಳ ವಿವರಗಳನ್ನು ಪರಿಷ್ಕರಿಸಿ ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ವಿವರ | ಪ್ರಸ್ತಾಪಿತ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1 | **ತರಬೇತಿದಾರರಿಗೆ ಗೌರವಧನ:**<br>303 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ 17564 ವಿದ್ಯಾರ್ಥಿಗಳಿಗೆ ಒಟ್ಟು 450 ಬ್ಯಾಚ್ (ಪ್ರತಿ ಬ್ಯಾಚ್ 40 ವಿದ್ಯಾರ್ಥಿಗಳು) (ಪ್ರತಿ ಬ್ಯಾಚ್ ಗೆ 60 ನಿಮಿಷಗಳ ಅವಧಿಯ 01 ತರಗತಿಯಂತೆ ವಾರದಲ್ಲಿ ಎರಡು ತರಗತಿಗಳಂತೆ ಒಂದು ತಿಂಗಳಿಗೆ 08 ತರಗತಿಗಳು ಒಟ್ಟು ಆರು ತಿಂಗಳಿಗೆ = 48 ತರಗತಿಗಳು)<br><br>ಒಟ್ಟು ತರಗತಿಗಳು=450*48=21600 ತರಗತಿಗಳು<br>ಪ್ರತಿ ತರಗತಿಗೆ ರೂ.500 ರ ಗೌರವಧನದಂತೆ 21600 ತರಗತಿಗಳಿಗೆ | 108.00 |
| 2 | **ಪ್ರಯಾಣ ವೆಚ್ಚ ಮತ್ತು ಇತರೆ ವೆಚ್ಚ:**<br>ಪ್ರತಿ ತರಗತಿಗೆ ರೂ.100/- ರಂತೆ 21600 ತರಗತಿಗಳಿಗೆ | 20.60 |

| | | |
|---|---|---|
| 3 | **ದಾಖಲೀಕರಣ ಹಾಗೂ ಪ್ರಾಸಂಗಿಕ ವೆಚ್ಚ**:<br>ಪ್ರತಿ ಬ್ಯಾಚ್ ಗೆ ರೂ.1000/- 303 ವಿದ್ಯಾರ್ಥಿ ನಿಲಯಗಳು 450 ಬ್ಯಾಚ್ ಗಳು | 4.50 |
| | **ಒಟ್ಟು** | **133.10** |

ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಿರ್ವಹಿಸುತ್ತಿರುವ 303 ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳ 17564 ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ತರಬೇತಿಯಾದ ಕರಾಟೆ, ಜೂಡೋ, ಟೆಕ್ವಾಂಡೋ ಇತ್ಯಾದಿ ನೀಡಲು ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಕಇ 389 ಪಕವಿ 2021, ಬೆಂಗಳೂರು ದಿನಾಂಕ:19-11-2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಬಾಲಕಿಯರ ಸ್ವಯಂ ರಕ್ಷಣೆಗಾಗಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸಲಾಗುತ್ತಿರುವ 303 ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ 2021-22ನೇ ಸಾಲಿನಲ್ಲಿ ದಾಖಲಾಗಿರುವ 17564 ವಿದ್ಯಾರ್ಥಿನಿಯರಿಗೆ ಸ್ವಯಂ ರಕ್ಷಣಾ ತರಬೇತಿಯಾದ ಕರಾಟೆ, ಜೂಡೋ, ಟೆಕ್ವಾಂಡೋ ಮತ್ತು ಇತ್ಯಾದಿ ನೀಡಲು ಈ ಕೆಳಕಂಡಂತೆ ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ.ಸಂ | ವಿವರ | (ರೂ.ಲಕ್ಷಗಳಲ್ಲಿ) |
|---|---|---|
| 1 | **ತರಬೇತಿದಾರರಿಗೆ ಗೌರವಧನ:**<br>303 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ 17564 ವಿದ್ಯಾರ್ಥಿಗಳಿಗೆ ಒಟ್ಟು 450 ಬ್ಯಾಚ್ (ಪ್ರತಿ ಬ್ಯಾಚ್ 40 ವಿದ್ಯಾರ್ಥಿಗಳು) (ಪ್ರತಿ ಬ್ಯಾಚ್ ಗೆ 60 ನಿಮಿಷಗಳ ಅವಧಿಯ 01 ತರಗತಿಯಂತೆ ವಾರದಲ್ಲಿ ಎರಡು ತರಗತಿಗಳಂತೆ ಒಂದು ತಿಂಗಳಿಗೆ 08 ತರಗತಿಗಳು ಒಟ್ಟು ಆರು ತಿಂಗಳಿಗೆ = 48 ತರಗತಿಗಳು)<br>ಒಟ್ಟು ತರಗತಿಗಳು=450*48=21600 ತರಗತಿಗಳು<br>ಪ್ರತಿ ತರಗತಿಗೆ ರೂ.500 ರ ಗೌರವಧನದಂತೆ 21600 ತರಗತಿಗಳಿಗೆ | 108.00 |
| 2 | **ಪ್ರಯಾಣ ವೆಚ್ಚ ಮತ್ತು ಇತರೆ ವೆಚ್ಚ**:<br>ಪ್ರತಿ ತರಗತಿಗೆ ರೂ.100/- ರಂತೆ 21600 ತರಗತಿಗಳಿಗೆ | 20.60 |
| 3 | **ದಾಖಲೀಕರಣ ಹಾಗೂ ಪ್ರಾಸಂಗಿಕ ವೆಚ್ಚ**:<br>ಪ್ರತಿ ಬ್ಯಾಚ್ ಗೆ ರೂ.1000/- 303 ವಿದ್ಯಾರ್ಥಿ ನಿಲಯಗಳು 450 ಬ್ಯಾಚ್ ಗಳು | 4.50 |
| | **ಒಟ್ಟು** | **133.10** |

ಮೇಲ್ಕಂಡ ತರಬೇತಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದನ್ವಯ ಕಡ್ಡಾಯವಾಗಿ ಇ-ಟೆಂಡರ್ ಕರೆದು ತರಬೇತಿ ಸಂಸ್ಥೆಯನ್ನು ಆಯ್ಕೆ ಮಾಡಲು ಕ್ರಮವಹಿಸುವುದು.

ಸದರಿ ಅನುದಾನವನ್ನು 2022-23ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಲೆಕ್ಕಶೀರ್ಷಿಕೆ:2225-00-101-0-61 (090) ರಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಇ 526 ವೆಚ್ಚ-12/2022 ದಿನಾಂಕ:03-09-2022 ಮತ್ತು ಆದೇಶ ಸಂಖ್ಯೆ;ಎಫ್ ಡಿ 01 ಟಿಎಫ್ ಪಿ 2022, ದಿನಾಂಕ: 04-04-2022 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ: ಪ್ರಜ್ಞಾ ಅಮ್ಮೆಂಬಳ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:-**

1. ಮಹಾಲೇಖಪಾಲರು (ಎ&ಇ ಲೆಕ್ಕ ಪರಿಶೋಧನೆ 1,2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4. ಎಲ್ಲಾ ಜಿಲ್ಲೆಯ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
5. ಕಲ್ಯಾಣ ಕೇಂದ್ರ, 24/7 helpdesk, ಸಮಾಜ ಕಲ್ಯಾಣ ಇಲಾಖೆ, ಯವನಿಕ ಆವರಣ, ನೃಪತುಂಗ ರಸ್ತೆ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ
3. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ.

*****